ಔಷಧಿಗಳ ಮೇಲಿನ ತೆರಿಗೆ

೧೧೪೧. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಔಷಧಿಗಳ ಮೇಲೆ ಇರತಕ್ಕ ತೆರಿಗೆಯನ್ನು ಹೋಲಿಸಿದಲ್ಲಿ, ಕರ್ನಾಟಕ ರಾಜ್ಯದಲ್ಲಿ ಔಷಧಿಗಳ ಮೇಲೆ ಶೇಕಡ ೮ ರಿಂದ ೧೨ ಹೆಚ್ಚು ತೆರಿಗೆ ಇರುವುದು ನಿಜವೇ ;

ಆ) ಗಡಿ ಪ್ರದೇಶದಲ್ಲಿರುವ ಔಷಧ ವ್ಯಾಪಾರಿಗಳು ಸುಳ್ಳು ದಾಖಲೆಗಳನ್ನು ಇಟ್ಟುಕೊಂಡು ಪಕ್ಕದ ರಾಜ್ಯಗಳಿಂದ ಔಷಧಿಯನ್ನು ಖರೀದಿಸುವುದರಿಂದ ರಾಜ್ಯದ ರಾಜಸ್ವ ನಷ್ಟವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ಸರ್ಕಾರದವರು ಔಷಧಿಗಳ ಮೇಲಿನ ತೆರಿಗೆಯನ್ನು ಪಕ್ಕದ ರಾಜ್ಯಗಳಲ್ಲಿ ಇರುವಂತೆ ನಿಗದಿಪಡಿಸಲು ತೆಗೆದುಕೊಂಡ ಕ್ರಮವೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಇಲ್ಲ.

ಆ) ಇಲ್ಲ.

ಇ) ಉಪ ಪ್ರಶ್ನೆಗಳು (ಅ) ಮತ್ತು (ಆ)ಗೆ ನೀಡಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಹುಚ್ಚರ್ಜಿ ನಾಯಿ ಕಡಿತ ಪ್ರಕರಣಗಳು

೧೧೪೩. ಶ್ರೀಮತಿ ಮನೋರಮಾ ಮದ್ವರಾಜ್ (ಉಡುಪಿ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೫–೮೬, ೧೯೮೬–೮೭ ಮತ್ತು ೧೯೮೭–೮೮ ಸಾಲಿನಲ್ಲಿ ರಾಜ್ಯದಲ್ಲಿ ಹುಚ್ಚುನಾಯಿ ಕಡಿತ ಪ್ರಕರಣಗಳು, ಚಿಕಿತ್ಸೆ ಒದಗಿಸಿದವರ ಸಂಖ್ಯೆ ಮತ್ತು ಸಾವಿಗೀಡಾದವರೆಷ್ಟು ?

ಆ) ಈ ಸಾಲುಗಳಲ್ಲಿ ಎಲ್ಲಾ ಆಸ್ಪತ್ರೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಹುಚ್ಚುನಾಯಿ ಕಡಿತಕ್ಕೆ ಲಸಿಕೆ ಸರಬರಾಜು ಆಗಿದೆಯೇ ? (ಜಿಲ್ಲಾವಾರು ಅಂಕಿ ಅಂಶಗಳನ್ನು ಕೊಡುವುದು).

ಇ) ೧೯೮೭–೮೮ರ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹುಚ್ಚುನಾಯಿ ಕಡಿತಕ್ಕೆ ಬೇಕಾದ ಲಸಿಕೆಯ ಕೊರತೆ ಇದ್ದುದು ಪಾಸ್ತವವೇ ?

ಈ) ಹಾಗಿದ್ದಲ್ಲಿ, ಈ ಕೊರತೆಗೆ ಕಾರಣರಾದ ಜವಾಬ್ದಿಗೆ ಶಿಕ್ಷೆ ವಿಧಿಸಲಿಕ್ಕೆ ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ನಾಯಿಕಡಿತದ ಪ್ರಕರಣಗಳ ವಿವರಗಳು ಈ ಕೆಳಕಂಡಂತೆ ಇವೆ,

	೧೯೮೫–೮೬	೧೯೮೬–೮೭	೧೯೮೭–೮೮ (ಡಿಸೆಂಬರ್ ೧೯೮೭ರ ವರೆಗೆ)
ನಾಯಿಕಡಿತ ಪ್ರಕರಣಗಳು	೯೧೫೨	೧೦೪೪೭	೯೧೧೩
ಚಿಕಿತ್ಸೆ ಪಡೆದವರು	೮೬೫೬	೧೦೩೧೦	೯೦೧೩
ಮೃತಪಟ್ಟವರು	೧೧೨	೧೨೩	೭೯

ಅ) ಸಾಕಷ್ಟು ಸರಬರಾಜಾಗಿತ್ತು.

ಜಿಲ್ಲಾವಾರು ವಿವರಗಳನ್ನು ಇದಕ್ಕೆ ಲಗತ್ತಿಸಿರುವ ಪಟ್ಟಿಯಲ್ಲಿ ನಮೂದಿಸಿದೆ.

ಇ) ೧೯೮೭-೮೮ನೇ ಸಾಲಿನಲ್ಲಿ ತಾತ್ಕಾಲಿಕವಾಗಿ ಕೊರತೆ ಇದ್ದು, ಈ ಕೆಳಕಂಡಂತೆ ಸರಬರಾಜು ಮಾಡಲಾಗಿದೆ. ಪಿಪಿಲೆ ಸೀಸೆಗಳು (ಒಂದು ಸೀಸೆ ೫೦ ಎಂ.ಎಲ್. ಅಳತೆ)

೨೭೫೦ ಸಿ.ಸಿ. ಕೂನೂರಿನ ಪ್ಯಾಚ್ಟರ್ ಸಂಸ್ಥೆಯಿಂದ ದಿನಾಂಕ ೨೪-೩-೮೮ರ ಪತ್ರದ ಪ್ರಕಾರ ಸರಬರಾಜು ಆಗಿದೆ.

ಈ) ಮೇಲಿನ ''ಇ'' ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಇದಕ್ಕೆ ಉತ್ತರವಿಲ್ಲ.

Statement showing the Districtwise supply of A. R. Vaccine from Vaccine Institute, Belgaum.

(VIALS OF 30 ML EACH)

Sl. No.	District	1985-86	1986-87	April 87 Feb. 88
1	2	3	4	5
1	Bangalore	15840	8017	5347
2	Chitradurga	3655	4302	3619
3	Kolar	3202	2729	2579
4	Shimoga	3648	3197	2834
5	Tumkur	3360	3286	2983
6	Belgaum	3910	3316	3039
7	Bijapur	2175	1914	1666
8	Dharwar	4737	3677	3535
9	Karwar	1435	1984	1515
10	Gulbarga	1923	1506	1719
11	Bellary	2103	1839	1562
12	Bidar	1079	898	893
13	Raichur	1455	1322	1260
14	Mysore	5034	6092	3746
15	Chickmagalur	2149	1928	2102
16	Kodagu	951	1367	1677
17	Dakshina Kannada	4010	4715	3343
18	Hassan	1956	2012	1871
19	Mandya	2172	2607	2017
	Total :	64794	57008	47357